MS – 045

# II Semester B.B.M. Examination, May/June 2014
## (Repeaters) (2010 – 11 only)
## ಕನ್ನಡ ಭಾಷೆ – II
## ಸಾಹಿತ್ಯ ಸಮನ್ವಯ – 2 ಮತ್ತು ವೈಶಾಖ

Time : 3 Hours Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : (10×1=10)

1) 'ಬಾಳಿನ ಹಂಬಲ' ಕವಿತೆಯನ್ನು ಯಾವ ಕವನ ಸಂಕಲನದಿಂದ ಆರಿಸಲಾಗಿದೆ ?

2) 'ಕನ್ನಡದ ಕಣ್ವ' ಎಂದು ಯಾರನ್ನು ಕರೆಯುತ್ತಾರೆ ?

3) ವರ್ಧಮಾನ ಕವಿತೆ ಕನ್ನಡದ ಯಾವ ಪಂಥಕ್ಕೆ ಸೇರಿದೆ ?

4) ಚನ್ನವೀರ ಕಣವಿಯವರು ಯಾವ ಹೆಸರಿನಿಂದ ಕನ್ನಡ ಸಾಹಿತ್ಯವಲಯದಲ್ಲಿ ಚಿರಪರಿಚಿತರಾಗಿದ್ದಾರೆ ?

5) ಬೇಲಿಯ ಮೇಲಿನ ಹೂವಿನ ಬಣ್ಣ ಯಾವುದು ?

6) 'ಕುರಿಗಳು ಸಾರ್ ಕುರಿಗಳು' ಕವಿತೆಯಲ್ಲಿ ಯಾರನ್ನು ವಿಡಂಬಿಸುತ್ತಾರೆ ?

7) 'ಸಂಕಲ್ಪಗಳು' ಎಂಬ ಪ್ರಬಂಧ ಸಂಕಲನದಿಂದ ಯಾವ ಲಲಿತ ಪ್ರಬಂಧವನ್ನು ಆರಿಸಲಾಗಿದೆ ?

8) ಕು.ವೆಂ.ಪು.ರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

9) 'ಜನ ಮರಳೋ ಜಾತ್ರೆ ಮರಳೋ' ಎಂಬ ಗಾದೆ ಚರ್ಚಿಸುವ ಲೇಖನ ಯಾವುದು ?

10) 'ಪ್ರಗತಿ' ಎಂದರೇನು ?

II. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ : (5×2=10)

ST. CLARET COLLEGE LIBRARY

1) ಕೃಷ್ಣಶಾಸ್ತ್ರಿ

2) ಜ್ಯೋತಿಷ್ಯಶಾಸ್ತ್ರ

3) ಬಿ.ಎಂ.ಶ್ರೀ.

4) ಗಾಡಿ ಪ್ರಯಾಣದ ಅನುಭವ

5) 'ಅತಿಥಿ ಮತ್ತು ಕೋತಿ' ಲೇಖನದ ರಸಮಯ ಕ್ಷಣಗಳು

6) ನಿಸಾರರ ಕವಿತೆಯಲ್ಲಿನ ವಿಡಂಬನೆ

7) ನವ್ಯ ಸಾಹಿತ್ಯ

8) ವಿಶ್ವೇಶ್ವರ.

P.T.O.

III. ಇವುಗಳಲ್ಲಿ ಒಂದನ್ನು ವಿಶ್ಲೇಷಿಸಿ : (1×6=6)

1) ಒಂದು ದಿನದೊಳಿರುಳಿನಲ್ಲಿ
ಕಿರಣವೊಂದು ಹೊನ್ನ ಚೆಲ್ಲಿ
ಬಾಳ ಸೆರೆಯ ಬೆಳಗೆ, ತಾತ
ಚಕಿತರಾದರು :
''ಬಂದು ಬಾಳಿಗರ್ಥವಿತ್ತೆ,
ಮೃತ್ಯು'' ಎಂದರು

**ಅಥವಾ**

ಕನ್ನಡ ನುಡಿ, ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು;
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು.

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (6×4=24)

1) ವಿವೇಕನ 'ಮಗುವಿನ ಪ್ರೀತಿಯೇ' ಕೆಲಸಕ್ಕೆ ಮುಳ್ಳಾದ ಬಗೆ ಹೇಗೆ ? ವಿವರಿಸಿ.
2) ಗಾಡಿ ಪ್ರಯಾಣದ ಅನುಭವಗಳನ್ನು ವಿವರಿಸಿ.
3) ಬಿ.ಎಂ.ಶ್ರೀ.ಯವರ ಕನ್ನಡ ಭಾಷಾಪ್ರೇಮ 'ಕಾಣಿಕೆ' ಯಲ್ಲಿ ಹೇಗೆ ವ್ಯಕ್ತವಾಗಿದೆ ?
4) ಜ್ಯೋತಿಷ್ಯವನ್ನು ಲೇಖಕರು ಖಂಡಿಸಲು ಕಾರಣವೇನು ?
5) ಪರಿಸರ ಕಾಳಜಿ ಬಗ್ಗೆ ಲೇಖಕರ ಅಭಿಪ್ರಾಯವೇನು ?
6) ಪು.ತಿ.ನ.ರವರ ಕವಿತೆಯ ಸ್ವಾರಸ್ಯವೇನು ?
7) ನಿಸಾರರ ಕವಿತೆಯ ಆಶಯವೇನು ? ತಿಳಿಸಿ.
8) ಹಾಲಿನವಳ ಲೆಕ್ಕದ ವಿವರವನ್ನು ಸಂಕ್ಷಿಪ್ತವಾಗಿ ವಿವರಿಸಿ.

V. ಇವುಗಳಿಗೆ ವಿಶ್ಲೇಷಣಾತ್ಮಕ ಉತ್ತರ ಬರೆಯಿರಿ : (4×10=40)

1) ಭಾರತೀಯ ಸಂಸ್ಕೃತಿ, ಪಾಶ್ಚಾತ್ಯರ ನಡಾವಳಿಗಳು ಮುಖಾಮುಖಿಯಾಗುವ ಸನ್ನಿವೇಶವನ್ನು ಬರೆಯಿರಿ.

**ಅಥವಾ**

'ಆಧುನಿಕ ಮೋಟಾರುಗಳಿಗಿಂತ ಎತ್ತಿನಗಾಡಿಯ ಪ್ರಯಾಣವೇ ಮೇಲು' – ಎಂದು ಲೇಖಕರು ಭಾವಿಸಲು ಕಾರಣವೇನು ? ವಿವರಿಸಿ.

2) 'ಕಾಣಿಕೆ' ಕವಿತೆಯ ಆಶಯ ಕುರಿತು ಬರೆಯಿರಿ.

**ಅಥವಾ**

'ಬಾಳ ಹಂಬಲ' ಕವಿತೆಯಲ್ಲಿ ಬದಲಾಗುವ ಹಂಬಲಗಳ ಸ್ವರೂಪವನ್ನು ಕುರಿತು ಬರೆಯಿರಿ.

3) ವೈದಿಕ ಸಂಪ್ರದಾಯಗಳು 'ವೈಶಾಖ' ಕಾದಂಬರಿಯಲ್ಲಿ ಹೇಗೆ ಮೂಡಿ ಬಂದಿವೆ ? ವಿವರಿಸಿ.

**ಅಥವಾ**

ಜ್ಯೋತಿಶ್ಶಾಸ್ತ್ರದ ಬಗ್ಗೆ ಲೇಖಕರ ಅಭಿಪ್ರಾಯ ಸಂಗ್ರಹಿಸಿ ಬರೆಯಿರಿ.

4) ನಾಗೇಶ್ ಹೆಗಡೆಯವರ ಪರಿಸರ ಕಾಳಜಿಯ ಬಗ್ಗೆ ಬರೆಯಿರಿ.

**ಅಥವಾ**

'ವರ್ಧಮಾನ' ಕವಿತೆಯ ಆಶಯವನ್ನು ವಿವರಿಸಿ.